ಪದವಿ ಬೋಧಕರ ಹುದ್ದೆ

264 (676), ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ)

ಅ) ರಾಜ್ಯದ ಪದವಿ ಕಾಲೇಜುಗಳ ವಿವಿಧ ವಿಷಯದ ಉಪನ್ಯಾಸಕರ–ಬೋಧಕರ ಹುದ್ದೆಗಳ ನೇಮಕಾತಿಗೆ ಅನುಸರಿಸುವ ಮಾನದಂಡ ಹಾಗೂ ಶೈಕ್ಷಣಿಕ ವಿದ್ಯಾರ್ಹತೆಗಳೇನು;

ಆ) ಎಂ.ಕಾಂ. ಹಾಗೂ ಎಂ.ಎಸ್.ಡಬ್ಲ್ಯೂ ಪಡೆದ ಸ್ನಾತಕೋತ್ತರ ಪದವೀಧರರು ಉಪನ್ಯಾಸಕರಾಗಲು ಅರ್ಹತೆ ಹೊಂದಿರುತ್ತಾರೆಯೇ;

ಇ) ಈ ರೀತಿಯ ನಿಯಮವನ್ನು ಸರ್ಕಾರ ಜಾರಿಗೊಳಿಸಿದೆಯೇ; ಹಾಗಿದ್ದಲ್ಲಿ, ಯಾವಾಗಿನಿಂದ ಜಾರಿಗೊಳಿಸಿದೆ; ಇದಕ್ಕೆ ಕಾರಣಗಳೇನು;

ಈ) ಸ್ನಾತಕೋತ್ತರ ಪದವಿಯ ವಿಷಯ ಆಧರಿಸಿ ಯುಜಿಸಿ, ಎನ್‌ಇಟಿ ಪರೀಕ್ಷೆ ನಡೆಸುತ್ತದೆಯೇ ಹೊರತು ಪದವಿ ಕೋರ್ಸ್‌ಗಳ ವಿಷಯ ಮಾನದಂಡದಿಂದಲ್ಲ ಎಂಬ ಬಗ್ಗೆ ಸರ್ಕಾರದ ನಿಲುವು ಏನು;

ಉ) ಹಾಗಿದ್ದಲ್ಲಿ, ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಬಿಬಿಎಂ ಪದವೀಧರರಿಗೆ ಎಂ.ಕಾಂ.ಗೆ ಪ್ರವೇಶಕ್ಕೆ ಅವಕಾಶ ಕಲ್ಪಿಸಿರುವ ಉದ್ದೇಶವೇನು;

ಊ) ಈ ಹಿಂದೆಯೂ ಸದರಿ ಪದವಿ ಮುಗಿಸಿದಂತಹ ಅಭ್ಯರ್ಥಿಗಳನ್ನು ಎಂ.ಕಾಂ. ಮಾಡಿದವರಾಗಿದ್ದಾರೆ. ಉಪನ್ಯಾಸಕ ಬೋಧಕರಾಗಲು ಅರ್ಹತೆ ಪರಿಗಣಿಸಿರುವಾಗ ಇಂತಹ ವಿಷಯದ ಮೇಲಿನ ಪದವಿ ನಿರ್ಬಂಧವೇಕೆ?

ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು)

ಅ) ಯು.ಜಿ.ಸಿ. ನಿಯಮಾನುಸಾರ ಸಂಬಂಧಪಟ್ಟ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಸಾಮಾನ್ಯ ವರ್ಗದವರು ಶೇ.55%ರಷ್ಟು ಅಂಕಗಳನ್ನು ಪಡೆದಿರಬೇಕು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಹಾಗೂ ವಿಕಲಚೇತನರಿಗೆ ಶೇ.5% ರಷ್ಟು

ಅಂಕಗಳನ್ನು ವಿನಾಯಿತಿ ನೀಡಲಾಗಿದೆ. ಇದರೊಂದಿಗೆ ಎನ್‌ಇಟಿ/ಎಸ್‌ಎಲ್‌ಇಟಿ/ಪಿಹೆಚ್.ಡಿ (ಕೋರ್ಸ್‌ವರ್ಕ್‌ನೊಂದಿಗೆ) ವಿದ್ಯಾರ್ಹತೆಗಳನ್ನು ಹೊಂದಿರಬೇಕು.

ಆ) ಹೌದು.

ಸ್ನಾತಕೋತ್ತರ ಪದವಿಯೊಂದಿಗೆ ಯು.ಜಿ.ಸಿ. ನಿಗದಿಪಡಿಸಿದ ಎನ್.ಇ.ಟಿ./ಎಸ್.ಎಲ್.ಇ.ಟಿ./ಪಿ.ಹೆಚ್.ಡಿ. (ಕೋರ್ಸ್‌ವರ್ಕ್‌ನೊಂದಿಗೆ) ವಿದ್ಯಾರ್ಹತೆ ಹೊಂದಿದವರು ಉಪನ್ಯಾಸಕರಾಗಲು ಅರ್ಹತೆ ಹೊಂದಿರುತ್ತಾರೆ.

ಇ) ಹೌದು.

ಯು.ಜಿ.ಸಿ. ನಿಯಮಾವಳಿಗಳಂತೆ ಹೆಚ್ಚುವರಿ ವಿದ್ಯಾರ್ಹತೆಯಾದ ಎನ್.ಇ.ಟಿ./ಎಸ್.ಎಲ್.ಇ.ಟಿ./1993 ರಿಂದ ಜಾರಿಗೊಳಿಸಿದೆ ಯು.ಜಿ.ಸಿ.ಯ ವೇತನ ಶ್ರೇಣಿಯನ್ನು ದಿ:01.01.1986 ರಿಂದ ವಿಸ್ತರಿಸಿದ ಹಿನ್ನೆಲೆಯಲ್ಲಿ ಯು.ಜಿ.ಸಿ.ಯು ಕಾಲಕಾಲಕ್ಕೆ ನಿಗದಿಪಡಿಸುವ ವಿದ್ಯಾರ್ಹತೆಯನ್ನು ಪರಿಗಣಿಸಿ ಆದೇಶ ಹೊರಡಿಸಲಾಗುತ್ತಿದೆ.

ಈ) ಯು.ಜಿ.ಸಿ.ಯು ಕಾಲಕಾಲಕ್ಕೆ ನಿಗದಿಪಡಿಸುವ ನಿಬಂಧನೆಗಳನ್ನು ಸರ್ಕಾರವು ಪಾಲಿಸುತ್ತದೆ.

ಉ) ಬಿ.ಬಿ.ಎಂ. ಪದವೀಧರರು ಎಂ.ಕಾಂ. ಪದವಿ ಪಡೆದಲ್ಲಿ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುತ್ತದೆ.

ಊ) ಈ ಬಗ್ಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಎಲ್ಲಾ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ವಿಷಯ ತಜ್ಞರುಗಳನ್ನೊಳಗೊಂಡ ಸಾಮಾನ್ಯ ಸಭೆಯ ಸರ್ವಾನುಮತದ ಶಿಫಾರಸ್ಸಿನಂತೆ, ಸರ್ಕಾರದ ಹಂತದಲ್ಲಿ ಆದೇಶ ಹೊರಡಿಸಲಾಗಿದೆ.